ದಿನಾಂಕಃ 18.06.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಟಿ ಎಂ ವಕೀಲರಿಂದಃ

1. ನನಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳಿರುತ್ತಾರೆ. ಧರ್ಮ ನನ್ನ ಮಗ. ಅವರಿಗೆ ವಿವಾಹವಾಗಿರುವುದಿಲ್ಲ. ನನ್ನ ಮಗಳನ್ನು ಚಿಗಳೂರಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಚಿಕ್ಕಮಗಳೂರಿನ ಶಿವಪ್ರಕಾಶ್ ನನಗೇನಾಗಬೇಕು ಎಂದರೆ ಸಂಬಂಧ ಇರುವುದಿಲ್ಲ. ನನ್ನ ಮಗ ಧರ್ಮ ರವರು ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಈ ದೂರಿನ ಬಗ್ಗೆ ವಕೀಲರು ತಿಳಿಸಿದ ನಂತರ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿ. ನನಗೆ ಈ ದೂರಿನ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪಿರ್ಯಾದಿ ಮತ್ತು ಆರೋಪಿ ನಡುವೆ ನಡೆದ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ವ್ಯವಹಾರ ನನ್ನ ಮುಂದೆ ನಡೆದಿರುತ್ತದೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ನನಗೆ 4 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನ ಮೇಲೆ ಸಾಲ ಇರುತ್ತದೆ ಎಂದರೆ ಸರಿಯಲ್ಲ. ಜಮೀನು ಇದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುವುದಿಲ್ಲ. ಧರ್ಮ ರವರಿಗೂ ಮತ್ತು ಆರೋಪಿಗೂ ಹೇಗೆ ಪರಿಚಯ ಆಗಿರುತ್ತದೆ ಎಂದರೆ ಸ್ನೇಹಿತರು. ಆರೋಪಿಯು ಧರ್ಮರವರಿಗೆ ಯಾವ ದಿನಾಂಕ ಹಣ ಕೇಳಿರುತ್ತಾರೆ ಎಂದರೆ

ಹಣ ನೀಡಿದ ಒಂದು ವಾರ ಮುಂಚಿತವಾಗಿ ಹೇಳಿರುತ್ತಾರೆ. ಸದರಿ ಹಣವನ್ನು ಹೇಗೆ ಹೊಂದಿಸಿರುತ್ತೀರಾ ಎಂದರೆ ಶುಂಠಿ, ಜೋಳ ಮತ್ತು ಭತ್ತವನ್ನು ಮಾರಾಟ ಮಾಡಿ ಬಂದ ಹಣವನ್ನು ಕೂಡಿಟ್ಟಿರುತ್ತೇವೆ. ಸದರಿ ಮಾರಾಟಕ್ಕೆ ಸಂಬಂಧಪಟ್ಟ ದಾಖಲಾತಿ ಇದೆಯೇ ಎಂದರೆ ಇಲ್ಲ. ನಮ್ಮ ಬಳಿ ಬಿಪಿ ಎಲ್ ಕಾರ್ಡ ಇರುತ್ತದೆ ಎಂದರೆ ಸರಿ. ಆರೋಪಿ ಒಬ್ಬರೇ ಸಾಲವನ್ನು ಪಡೆದುಕೊಂಡಿರುತ್ತಾರೆ. ಸದರಿ ಹಣವನ್ನು ನಾನು ಅಥವಾ ಧರ್ಮ ರವರು ನೀಡಿರುತ್ತಾರಾ ಎಂದರೆ ನಾನು ಕೂಡಿಟ್ಟಿರುವ ಹಣವನ್ನು ಧರ್ಮ ರವರಿಗೆ ನೀಡಿರುತ್ತೇನೆ. ನಾನು ಹಣವನ್ನು ನೀಡಿರುತ್ತೇನೆ ಎಂದು ಪಿರ್ಯಾದಿಯಾಗಲೀ ಅಥವಾ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೀರಾ ಎಂದರೆ ಇಲ್ಲ.

1. ನಿಪಿ–1 ಕರ್ನಾಟಕ ಬ್ಯಾಂಕ್ ಗೆ ಸಂಬಂಧಪಟ್ಟಿರುತ್ತದೆ. ಆರೋಪಿ ಯಾವ ಊರಿನವರು ಎಂದರೆ ದೇವಿಗುಡ್ಡ ಚಿಕ್ಕಮಗಳೂರು ಜಿಲ್ಲೆ. ಆರೋಪಿ ಮನೆಗೆ ಹೋಗಿರುತ್ತೀರಾ ಎಂದರೆ ಇಲ್ಲ. ಆರೋಪಿ ಅವರ ಊರಿನ ಬಗ್ಗೆ ನನಗೆ ತಿಳಿಸಿರುತ್ತಾರೆ. ನಿಪಿ–1 ನ್ನು ಯಾರು ಬರೆದಿರುತ್ತಾರೆ ಎಂದರೆ ಆರೋಪಿಯೇ ಮೊದಲೇ ಬರೆದುಕೊಂಡು ಬಂದಿರುತ್ತಾರೆ ನಂತರದಲ್ಲಿ ನಮ್ಮ ಮುಂದೆ ಸಹಿ ಮಾಡಿರುತ್ತಾರೆ. ದಿಃ 01–06–2018 ರಂದು ನಿಪಿ–1 ನ್ನು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇವೆ. ನಿಪಿ–1 ರ ಮೇಲೆ ಯಾವ ದಿನಾಂಕ ನಮೂದಾಗಿರುತ್ತದೆ ಎಂದರೆ ನಾನು ನೋಡಿರುವುದಿಲ್ಲ. ಬ್ಯಾಂಕ್ ನಿಂದ ಏನೆಂದು ಹಿಂಬರಹ ನೀಡಿರುತ್ತಾರೆ ಎಂದರೆ ಸಾಕಷ್ಟು ಹಣ ಇಲ್ಲ ಎಂದು.

2. ಆರೋಪಿಗೆ ನೋಟೀಸ್ ನೀಡಿದ್ದೀರಾ ಎಂದರೆ ನೀಡಿರುತ್ತೇವೆ ದಿನಾಂಕ ನೆನಪಿರುವುದಿಲ್ಲ. ಆರೋಪಿಯನ್ನು ಹಿಂಬರಹ ಪಡೆದುಕೊಂಡ ನಂತರ ಭೇಟಿ ಮಾಡಿದ್ದೀರಾ ಎಂದರೆ ಫೋನ್ ಮೂಲಕ ಮಾತನಾಡಿರುತ್ತೇವೆ. ಆರೋಪಿಯ ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಆರೋಪಿಯು ಏನು ಕೆಲಸ ಮಾಡುತ್ತಾರೆ ಎಂದರೆ ಬಾರ್ ನಲ್ಲಿ ಕ್ಯಾಷಿಯರ್ ಆಗಿರುತ್ತಾರೆ. ಆರೋಪಿಗೆ ನೀಡಿದೆ ಎನ್ನಲಾದ ಹಣದ ಮುಖಬೆಲೆಗಳು ಎಷ್ಟು ಎಂದರೆ 500.00 (ಐದುನೂರು ರೂಪಾಯಿ)

3. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿ ಸಹಿಯನ್ನು ಹೊರತುಪಡಿಸಿ ಎಲ್ಲಾ ಬರವಣಿಗೆಗಳು ದಪ್ಪ ಅಕ್ಷರದಲ್ಲಿದೆ ಎಂದರೆ ಸರಿ. ನಿಪಿ-1 ರಲ್ಲಿರುವ ಸಹಿಗೂ ಮತ್ತು ಬರವಣಿಗೆ ಗಳಿಗೂ ಇಂಕಿನ ವ್ಯತ್ಯಾಸ ಇರುತ್ತದೆ ಎಂದರೆ ನನ್ನ ಮಗ ಆರೋಪಿ ಸೇರಿ ಮಾಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ.

4. ನನ್ನ ಮಗನಿಗೆ ತಿಂಗಳಿಗೆ ಎಷ್ಟು ಆದಾಯ ಬರುತ್ತಿತ್ತು ಎಂದರೆ ತಿಂಗಳಿಗೆ 6,000.00 (ಆರು ಸಾವಿರ)ಆರೋಪಿ ನನ್ನ ಮಗನೊಂದಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ 2 ಲಕ್ಷ ನೀಡುವ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ನಾನು ಕೂಡಿಟ್ಟ ಹಣದಲ್ಲಿ ನೀಡಿರುತ್ತಾರೆ. ನಿಪಿ-1 (ಎ) ಸಹಿಯನ್ನು ಹೊರತುಪಡಿಸಿ ಉಳಿದ ಬರವಣಿಗೆಳು ಆರೋಪಿಯದ್ದಲ್ಲ ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ.,ಆಲೂರು.